# ಅರ್ಜುನ್ ಸಿನಿಮಾ ಸಿದ್ಧಾಂತ

■ ರಮೇಶ ಕೆ.

ತುಳು ಸಿನಿಮಾ 'ಕುಡ್ಲ ಕೆಫೆ' ಮೂಲಕ ಬೆಳ್ಳಿತೆರೆ ಪ್ರವೇಶಿಸಿದ್ದ ನಟ ಅರ್ಜುನ್ ವೇದಾಂತ, ಕನ್ನಡದೊಂದಿಗೆ ತಮಿಳು, ತೆಲುಗು ಸಿನಿಮಾರಂಗದಲ್ಲಿಯೂ ತಮ್ಮ ಅದೃಷ್ಟ ಪರೀಕ್ಷೆ ನಡೆಸಿದವರು.

ಅವರ ನಟನೆಯ ಮತ್ತೊಂದು ಸಿನಿಮಾ 'ಮರಳಿ ಮನಸಾಗಿದೆ' ಬಿಡುಗಡೆಗೆ ಸಿದ್ಧವಾಗಿದ್ದು, ಈ ಸಿನಿಮಾ ತಮ್ಮ ಪ್ರತಿಭೆಯನ್ನು ಸಾಬೀತುಗೊಳಿಸಲು ಉತ್ತಮ ವೇದಿಕೆಯಾಗುವ ನಿರೀಕ್ಷೆ ವ್ಯಕ್ತಪಡಿಸಿದ್ದಾರೆ.

ಮೂಲತಃ ಪುತ್ತೂರಿನವರಾದ ಅರ್ಜುನ್ ಮೂಲ ಹೆಸರು ಮನೋಜ್. ಸಿನಿಮಾಗಾಗಿ ಅರ್ಜುನ್ ವೇದಾಂತ ಎಂದು ಹೆಸರು ಬದಲಾಯಿಸಿಕೊಂಡಿದ್ದಾರೆ.

ಮೈಸೂರಿನ ರಂಗಾಯಣದಲ್ಲಿ ಡಿಪ್ಲೊಮಾ ಇನ್ ಥಿಯೇಟರ್ ಎಜುಕೇಷನ್ ತರಬೇತಿ ಪಡೆದ ಅವರು ಮಂಗಳೂರಿನಲ್ಲಿ ನಾಟಕಗಳನ್ನು ಮಾಡುತ್ತಿದ್ದರು. ಆ ಸಮಯದಲ್ಲಿ ನಿರ್ದೇಶಕ ಸೂರ್ಯ ಮೆನನ್ ಅವರು 'ಕುಡ್ಲ ಕೆಫೆ' ಚಿತ್ರದ ಅವಕಾಶವನ್ನು ಅರ್ಜುನ್ ಮುಂದಿಟ್ಟರು. ಅಲ್ಲಿಂದ ಇವರ ಸಿನಿ ಪಯಣ ಆರಂಭವಾಯಿತು.

ತುಳುವಿನಲ್ಲಿ 'ಪವಿತ್ರ', ಕನ್ನಡದಲ್ಲಿ 'ಹ್ಯಾಪಿ ಜರ್ನಿ', 'ಕೋಟಿಗೊಬ್ಬ 3', 'ರಿವೀಲ್', 'ಪರಸಂಗ', 'ಕುಮಾರಿ 21 ಎಫ್' ಹಾಗೂ ತೆಲುಗಿನ '14 ಡೇಸ್ ಲವ್' ಸಿನಿಮಾಗಳಲ್ಲಿ ಅರ್ಜುನ್ ನಟಿಸಿದ್ದಾರೆ. ವಿಶ್ವತ್ ನಾಯ್ಕ್ ನಿರ್ದೇಶನದ 'ಕಾಲನಾಗಿಣಿ', ಬಾಲಕಿಶೋರ್ ನಿರ್ದೇಶನದ 'ಅಹಿರಾವಣ' ತೆಲುಗು ಆ್ಯಕ್ಷನ್ ಸಿನಿಮಾ ಬಿಡುಗಡೆಗೆ ಸಿದ್ಧವಾಗಿವೆ. 'ಗಾಜನೂರು' ಸಿನಿಮಾ ಚಿತ್ರೀಕರಣ ನಡೆಯುತ್ತಿದೆ.

"ನಾಯಕ ನಟನಾಗಿ ಅಭಿನಯಿಸಿದ ತಮಿಳಿನ 'ಪಿ–2' ಸಿನಿಮಾ ಹೇಳಿಕೊಳ್ಳುವಂಥ ಯಶಸ್ಸು ಗಳಿಸಲಿಲ್ಲ. 'ಕುಡ್ಲ ಕೆಫೆ' ನನಗೆ ಹೆಸರು ತಂದುಕೊಟ್ಟಿತು. ಆ ನಟನೆಗಾಗಿ ರೆಡ್ ಎಫ್ಎಂನಿಂದ 'ಬೆಸ್ಟ್ ನೆಗೆಟಿವ್ ಪರ್ಫಾರ್ಮರ್' ಪ್ರಶಸ್ತಿ ಬಂತು. ಈಗ 'ಮರಳಿ ಮನಸಾಗಿದೆ' ಚಿತ್ರದ ಮೇಲೆ ಹೆಚ್ಚು ನಿರೀಕ್ಷೆ ಇದೆ" ಎನ್ನುತ್ತಾರೆ.

"ಕಾಲೇಜಿನಲ್ಲಿ ಶುರುವಾಗುವ ಪ್ರೀತಿಯನ್ನು ನಾಯಕ ಹೇಗೆ ಉಳಿಸಿಕೊಳ್ಳುತ್ತಾನೆ ಎನ್ನುವುದು 'ಮರಳಿ ಮನಸಾಗಿದೆ' ಚಿತ್ರ ಕಥೆ. ಈ ಸಂಗೀತಪ್ರಧಾನ ಪ್ರೇಮಕಥೆಯಲ್ಲಿ ಹಲವು ತಿರುವುಗಳಿವೆ. ಭಿನ್ನ ಧಾಟಿಯಲ್ಲಿ ಕಥೆ ಹೆಣೆದಿದ್ದಾರೆ. ಸಂಭಾಷಣೆ, ಸಾಹಸ ದೃಶ್ಯಗಳೂ ಪ್ರೇಕ್ಷಕರನ್ನು ರಂಜಿಸಲಿವೆ. ಎರಡನೇ ಭಾಗ ಕುತೂಹಲಕಾರಿ. ಹೊಸಬರ ತಂಡ ಉತ್ತಮ ಸಿನಿಮಾ ಮಾಡಿದೆ" ಎಂದು ಸಿನಿಮಾ ಬಗ್ಗೆ ವಿವರಿಸುತ್ತಾರೆ ಅರ್ಜುನ್.

ನವೀನ್ ಕುಮಾರ್ ಹಾಗೂ ಮಲ್ಲಿಕಾರ್ಜುನ್ ನಿರ್ಮಾಪಕರಾಗಿರುವ ಈ ಸಿನಿಮಾದಲ್ಲಿ ಸ್ಮೃತಿ ವೆಂಕಟೇಶ್, ನಿರೀಕ್ಷಾ ಶೆಟ್ಟಿ ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದಾರೆ. ಬೆಂಗಳೂರು, ದಾವಣಗೆರೆ, ಚಿಕ್ಕಮಗಳೂರು, ಉಡುಪಿ ಹಾಗೂ ಭಟ್ಕಳ ಭಾಗಗಳಲ್ಲಿ ಚಿತ್ರೀಕರಿಸಲಾಗಿದೆ. ನಾಗರಾಜ್ ಶಂಕರ್ ಸಿನಿಮಾ ನಿರ್ದೇಶಕರು. ವಿನು ಮನಸು ಅವರು ಸಂಗೀತ ನಿರ್ದೇಶನ ಮಾಡಿದ್ದಾರೆ. ಹಾಲೇಶ್ ಛಾಯಾಗ್ರಹಣವಿದ್ದು, ಹರೀಶ್ ಕೊಮ್ಮ ಸಂಕಲನವಿದೆ. ■





# ರಾಗಿಣಿ 'ಹೊಸ' ಮಾತು

ನಟಿ ರಾಗಿಣಿ ದ್ವಿವೇದಿ ಈ ವರ್ಷವನ್ನು ಹುಮ್ಮಸ್ಸಿನಿಂದ ಸ್ವಾಗತಿಸಿದ್ದಾರೆ, ಅಷ್ಟೇ ಅಲ್ಲ, ಈ ಹೊಸ ವರ್ಷದಲ್ಲಿ ಹೊಸತನದಲ್ಲಿ ಇರುವುದಾಗಿ ಹೇಳಿದ್ದಾರೆ.

'ಸಿನಿಮಾರಂಗಕ್ಕೆ ಕಾಲಿಟ್ಟು 15 ವರ್ಷಗಳು ಕಳೆದಿದ್ದು, ನನ್ನನ್ನು ಪುನರ್‌ವ್ಯಾಖ್ಯಾನಿಸಿಕೊಳ್ಳುವ ಸಮಯ ಇದು. ನನಗೆ ಈಗ ಭಿನ್ನವಾಗಿರುವ, ಸವಾಲು ಎನಿಸುವ, ಔಟ್ ಆಫ್ ದಿ ಬಾಕ್ಸ್‌ನಂಥ ಪ್ರಾಜೆಕ್ಟ್‌ಗಳಲ್ಲಿ ತೊಡಗಿಕೊಳ್ಳುವಾಸೆ. ಈ ವರ್ಷ ಹಲವು ಪ್ರಾಜೆಕ್ಟ್‌ಗಳು ನನ್ನ ಕೈಯಲ್ಲಿವೆ. ಹೀಗಾಗಿ ನನಗೆ ಇದು ಭರವಸೆಯ ವರ್ಷ. ಸಂಸ್ಕೃತದ ಒಂದು ಸಿನಿಮಾ ಬಿಡುಗಡೆಯಾಗಬೇಕಿದೆ. ತೆಲುಗು, ಮಲೆಯಾಳಂ ದ್ವಿಭಾಷಾ ಸಿನಿಮಾ ಶೂಟಿಂಗ್ ನಡೆಯುತ್ತಿದೆ. ಮೂರು ಕನ್ನಡ ಸಿನಿಮಾಗಳಿವೆ, ಎರಡು ತಮಿಳು ಸಿನಿಮಾಗಳು ಬಿಡುಗಡೆಯಾಗಬೇಕಿವೆ' ಎಂದು ವಿವರಿಸಿದ್ದಾರೆ.

ಸಿನಿಮಾ ಬದುಕಿನಲ್ಲಿ ಮಾತ್ರವಲ್ಲ, ತಮ್ಮ ಖಾಸಗಿ ಬದುಕಿನಲ್ಲಿಯೂ ಹಲವು ಬದಲಾವಣೆಗಳನ್ನು ಮಾಡಿಕೊಳ್ಳುವುದಾಗಿ ಹೇಳಿದ್ದಾರೆ.

'ನಾನು ಸೋಲೊ ಟ್ರಾವೆಲಿಂಗ್ ಎಂಜಾಯ್ ಮಾಡುತ್ತಿದ್ದೇನೆ. ಈ ವರ್ಷ ಮತ್ತಷ್ಟು ಸೋಲೊ ಟ್ರಿಪ್‌ಗಳನ್ನು ಮಾಡಬೇಕೆಂದುಕೊಂಡಿದ್ದೇನೆ. ಪ್ರವಾಸ ಮನಸ್ಸನ್ನು ಅರಳಿಸುತ್ತದೆ. ಸ್ವತಂತ್ರವಾಗುವುದನ್ನು ಕಲಿಸುತ್ತದೆ. ಜನರೊಂದಿಗೆ ಬೆರೆಯುವುದು, ಹೊಸ ಸಂಸ್ಕೃತಿ, ಹೊಸ ಪರಿಸರ, ಹೊಸ ಸ್ಥಳಗಳನ್ನು ಅನ್ವೇಷಿಸುವುದು ಬಹಳ ಆಸಕ್ತಿದಾಯಕ' ಎಂದು ಸಂತಸದಿಂದ ಹೇಳಿಕೊಂಡಿದ್ದಾರೆ. ■